## ಗ್ರಾ.ಪಂ.ಗಳ ವಿದ್ಯುತ್ ಬಿಲ್ ಬಾಕಿ ಮನ್ನಾ ಇಲ್ಲ: ಎಚ್.ಕೆ. ಪಾಟೀಲ್

**ಬೆಳಗಾವಿ:** ಗ್ರಾ.ಪಂ.ಗಳು ಬಾಕಿ ಉಳಿಸಿಕೊಂಡಿರುವ 3997.49 ಕೋಟಿ ರೂ. ವಿದ್ಯುತ್ ಬಿಲ್ ಮನ್ನಾ ಮಾಡುವ ಪ್ರಸ್ತಾವ ಇಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಎಚ್.ಕೆ. ಪಾಟೀಲ್ ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ. ಶರವಣ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಅವರು, ಪ್ರತಿ ತಿಂಗಳು ವಿದ್ಯುತ್ ಬಿಲ್ ಪಾವತಿಸಲು ಬಹುತೇಕ ಗ್ರಾ.ಪಂ.ಗಳು ಆರ್ಥಿಕವಾಗಿ ಸದೃಢವಾಗಿಲ್ಲದ ಕಾರಣ ಹಾಗೂ ಗ್ರಾ.ಪಂ.ಗಳು ಪಾವತಿಸುವ ವಿದ್ಯುತ್ ಬಿಲ್ಲನ್ನು ಎಸ್ಕಾಂಗಳು ಬಾಕಿ ಮೇಲಿನ ಬಡ್ಡಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳುತ್ತಿವೆ. ಹೀಗಾಗಿ, ಪ್ರತಿ ತಿಂಗಳು ಬಾಕಿ ಉಳಿಯುವ ವಿದ್ಯುತ್ ಬಿಲ್ ಮೊತ್ತಕ್ಕೆ ಬಡ್ಡಿ ಸೇರಿ ಗ್ರಾ.ಪಂ.ಗಳ ವಿದ್ಯುತ್ ಬಿಲ್ ಬಾಕಿ ಹಾಗೇ ಉಳಿಯುವಂತಾಗಿದೆ ಎಂದು ತಿಳಿಸಿದ್ದಾರೆ. 2014ರ ಏಪ್ರಿಲ್ 1ರಿಂದ ಗ್ರಾ.ಪಂ.ಗಳ ಚಾಲ್ತಿ ತಿಂಗಳ ವಿದ್ಯುತ್ ಬಿಲ್‌ಗಳನ್ನು ಶಾಸನಬದ್ಧ ಅನುದಾನದ ಶೇ 60ರಷ್ಟು ಹಾಗೂ ಕೇಂದ್ರ ಸರಕಾರದಿಂದ ಬಿಡುಗಡೆಯಾಗುವ 14ನೇ ಹಣಕಾಸು ಆಯೋಗದ ಶೇ 25ರಷ್ಟು ಮೊತ್ತವನ್ನು ಪ್ರತಿ ಗ್ರಾ.ಪಂ.ಗಳಿಗೆ ಪ್ರತ್ಯೇಕವಾಗಿ ತೆರೆಯಲಾಗಿರುವ ಎಸ್ಕ್ರೋ ಖಾತೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಈ ಖಾತೆಯಿಂದ ಸಂಬಂಧಪಟ್ಟ ಎಸ್ಕಾಂಗಳಿಗೆ ನಿಗದಿತ ಕಾಲಮಿತಿಯೊಳಗೆ ವಿದ್ಯುತ್ ಬಿಲ್ ಪಾವತಿಸಲಾಗುತ್ತಿದೆ ಎಂದಿದ್ದಾರೆ. 2014ರ ಮಾರ್ಚ್ 31ರವರೆಗೆ ರಾಜ್ಯದ ಎಲ್ಲ ಗ್ರಾ.ಪಂ.ಗಳ ವಿದ್ಯುತ್ ಬಿಲ್ ಬಾಕಿ ಮೊತ್ತ 3230.28 ಕೋಟಿ ರೂ.ಗಳಷ್ಟಿದೆ. ಈ ಮೊತ್ತವನ್ನು ಸರಕಾರದಿಂದ ಪಾವತಿಸುವ ಬಗ್ಗೆ ಚರ್ಚಿಸಲಾಗಿದೆ. ಚಾಲ್ತಿ ವಿದ್ಯುತ್ ಬಿಲ್‌ಗಳನ್ನು ಆಯಾ ಆರ್ಥಿಕ ವರ್ಷದಲ್ಲಿಯೇ ಪಾವತಿಸಲು ಗ್ರಾ.ಪಂ.ಗಳು ಕ್ರಮ ವಹಿಸಿದಲ್ಲಿ ಬಾಕಿ ಮೊತ್ತವನ್ನು ಸರಕಾರದಿಂದ ಎಸ್ಕಾಂಗಳಿಗೆ ಪಾವತಿಸಲು ಆರ್ಥಿಕ ಇಲಾಖೆ ಒಪ್ಪಿಗೆ ಸೂಚಿಸಿದೆ ಎಂದಿದ್ದಾರೆ.

**೮೦೦-೧೦೦೦ ಮೆಗಾವ್ಯಾಟ್ ವಿದ್ಯುತ್ ಕೊರತೆ**

## ಬೇಸಿಗೆಯಲ್ಲೂ ಲೋಡ್ ಶೆಡ್ಡಿಂಗ್ ಇಲ್ಲ

**ವಿಧಾನಸಭೆ:** ರಾಜ್ಯದಲ್ಲಿ ಈ ವರ್ಷ ಮಳೆ ಕೊರತೆಯಿಂದ ಹಿಂದೆಂದೂ ಕಂಡರಿಯದ ಪ್ರಮಾಣದಲ್ಲಿ ಬರ ಎದುರಾಗಿದೆ. ಹೀಗಿದ್ದೂ ಮುಂಬರುವ ಬೇಸಿಗೆಯಲ್ಲಿ ಯಾವುದೇ ರೀತಿಯಲ್ಲಿ ಲೋಡ್ ಶೆಡ್ಡಿಂಗ್ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.

ಪ್ರಶ್ನೋತ್ತರ ವೇಳೆ ಜೆಡಿಎಸ್ ಶಾಸಕ ಡಿ.ಸಿ. ತಮ್ಮಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ನೀರಿನ ಕೊರತೆಯಿಂದ ರಾಯಚೂರಿನ ಉಷ್ಣ ವಿದ್ಯುತ್ ಉತ್ಪಾದನೆಯೂ ಕಷ್ಟವಾಗುತ್ತಿದೆ. ಲಿಂಗನಮಕ್ಕಿಯಲ್ಲಿ ಶೇ. 48ರಷ್ಟು ನೀರಿನ ಸಂಗ್ರಹವಿದ್ದು ವಿದ್ಯುತ್ ಉತ್ಪಾದನೆ ಆಶಾದಾಯಕವಾಗಿದೆ. ಕಳೆದ ವರ್ಷ ಯೂನಿಟ್‌ಗೆ ರೂ., 5.8 ರದರಲ್ಲಿ ವಿದ್ಯುತ್ ಖರೀದಿಸಲಾಗಿತ್ತು. ಪ್ರಸ್ತುತ ರಾಜ್ಯದಲ್ಲಿ 800 ರಿಂದ 1000 ಮೆಗಾವ್ಯಾಟ್ ವಿದ್ಯುತ್ ಕೊರತೆ ಇದೆ ಎಂದೂ ಡಿ.ಕೆ. ಶಿವಕುಮಾರ್ ವಿವರಿಸಿದರು.

ರೈತರಿಗೆ ಹಾಗೂ ರಾಜ್ಯದ ಜನರ ಬಳಕೆಗೆ ವಿದ್ಯುತ್ ಕೊರತೆ ಆಗದಂತೆ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಲಾಗುತ್ತಿದೆ. ಮಧ್ಯಮಾವಧಿ ಖರೀದಿಗೆ ಯೂನಿಟ್‌ಗೆ ರೂ., 4.36 ದರ ನಿಗದಿಯಾಗಿದೆ. ಒಟ್ಟಾರೆ ಲಭ್ಯವಿರುವ ಎಲ್ಲ ಮೂಲಗಳಿಂದ ವಿದ್ಯುತ್ ಪಡೆದುಕೊಂಡು ಸಮಸ್ಯೆ ನೀಗಿಸುವ ಇಂಗಿತ ವ್ಯಕ್ತಪಡಿಸಿದರು.

ವಿಪಕ್ಷ ನಾಯಕ ಜಗದೀಶ್ ಶೆಟ್ಟರ್ ಮಾತನಾಡಿ, ಸರ್ಕಾರ ವಿದ್ಯುತ್ ಸಮಸ್ಯೆ ಎದುರಿಸಲು ಸಕಾಲಿಕ ಮುಂಜಾಗ್ರತಾ ಕ್ರಮ ಕೈಗೊಳ್ಳುವಲ್ಲಿ ಎಡವಿದೆ ಎಂದು ಆರೋಪಿಸಿ, ಗ್ರಾಮೀಣ ಪ್ರದೇಶ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೂ ಸಮರ್ಪಕ ವಿದ್ಯುತ್ ಸಿಗುತ್ತಿಲ್ಲ ಎಂದಿದ್ದಕ್ಕೆ ಸಮಸ್ಯೆ ಆಗದಂತೆ ಎಚ್ಚರ ವಹಿಸುವುದಾಗಿ ಇಂಧನ ಸಚಿವರು ತಿಳಿಸಿದರು.

## ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿಯು (ಬೆಸ್ಕಾಂ) ಬೇಗೂರಿನ 220 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಡಿ. 3ರಂದು ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿದ್ದು, ದೇವನಹಳ್ಳಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

'ಅಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಮೀನಕುಂಟೆ ಹೊಸೂರು, ಸಾದಹಳ್ಳಿ ಗೇಟ್, ನವರತ್ನ ಅಗ್ರಹಾರ, ಸ್ವಿಸ್ ಟೌನ್, ಮುಲಿಬೆರ್ರಿ, ಗುಂಡೂ ರಾವ್ ಎಸ್ಟೇಟ್, ಬೂದಿಗೆರೆ, ನಲ್ಲೂರು, ಕಗ್ಗಲಹಳ್ಳಿ, ಗಂಗವಾರಾ, ಎಂ.ಹೊಸಹಳ್ಳಿ, ಮಂಚಪಹಳ್ಳಿ, ಬೆಟ್ಟಕೋಟೆ, ಹೊಸಹಳ್ಳಿ, ಸಾತನೂರ್, ವಿದ್ಯಾನಗರ ಕ್ರಾಸ್, ಬಾಗಲೂರು ಹಾಗೂ ಸುತ್ತಮುತ್ತ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ' ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ವಿದ್ಯುತ್ ವ್ಯತ್ಯಯ ನಾಳೆ

ಅದೇ ರೀತಿ ರೆಮಿಡೆಕ್ಸ್ ಏರಿಯಾ, ಗಜಾನನ ನಗರ, ಕೆಟಿಜೆ ಕಾಲೇಜು ರಸ್ತೆ, ಲಕ್ಷ್ಮೀದೇವಿ ಬಡಾವಣೆ, ಬಿಡಬ್ಲ್ಯುಎಸ್‌ಎಸ್‌ಬಿ ಇನ್‌ಸ್ಟಾಲೇಷನ್ಸ್, ದೊಡ್ಡಣ್ಣ ಕೈಗಾರಿಕಾ ಎಸ್ಟೇಟ್, ಶ್ರೀಗಂಧ ಕಾವಲು, ಸುಂಕದಕಟ್ಟೆ, ಜೆಕೆಡಬ್ಲ್ಯು ಲೇಔಟ್, ಜನಪ್ರಿಯ ಹೈಟ್ಸ್, ಶೆಟ್ಟಿಹಳ್ಳಿ ರಸ್ತೆ, ಚಿಕ್ಕಲಸಂದ್ರ, ಬಾಬಣ್ಣ ಲೇಔಟ್, ಅಯ್ಯರ್ ಲೇಔಟ್, ತಿಗಳರಪಾಳ್ಯ, ಅಂಧ್ರಹಳ್ಳಿ, ದೊಡ್ಡಬಿದರಿ ಕಲ್ಲು, ಎಜಿಬಿಜಿ ಲೇಔಟ್, ಜನಪ್ರಿಯ ನಿವಾಸ, ಶೆಟ್ಟಿಹಳ್ಳಿ ರಸ್ತೆ, ಬಿಎಚ್‌ಇಎಲ್ ಮಿನಿ ಕಾಲೊನಿ, ಮುನೇಶ್ವರ ಬ್ಲಾಕ್, ಕಲ್ಯಾಣ ನಗರ, ಎಂಇಎಸ್ ರಸ್ತೆ, ರಾಘವೇಂದ್ರ ಲೇಔಟ್, ಪಾರ್ವತಿನಗರ, ಚೊಕ್ಕಸಂದ್ರ, ಲಕ್ಷ್ಮೀನಗರ, ರವೀಂದ್ರನಗರ, ಎಸ್.ಎಂ.ರಸ್ತೆ, ಗಾಟಿ ರಸ್ತೆ, ಜೆಮಿನಿರಸ್ತೆ, ವಿನಾಯಕನಗರ, ನಾಗಸಂದ್ರ, ಡಿಫೆನ್ಸ್ ಕಾಲೋನಿ, ಮುನೇಶ್ವರನಗರ, ಶ್ರೀಕಂಠೇಶ್ವರ ನಗರ, ಮೋದಿ ಆಸ್ಪತ್ರೆ ರಸ್ತೆ, ವೆಸ್ಟ್ ಆಫ್‌ಕಾರ್ಡ್ ರಸ್ತೆ, ಪೈಪ್‌ಲೈನ್ ರಸ್ತೆ, ಕುರುಬರಹಳ್ಳಿ, ಮಹಾಲಕ್ಷ್ಮೀಪುರ, ನಾಗಪುರ, ಗಾರ್ಡನ್ ಸಿಟಿ, ಇಂಡಸ್ಟ್ರಿಯಲ್ ಸಬರ್ಬ್, ಅಶೋಕ್‌ಪುರ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.



## ₹2000 ಕೋಟಿ ವಿದ್ಯುತ್ ಬಿಲ್ ಬಾಕಿ

ರಾಜ್ಯ ಸರ್ಕಾರ ಕಳೆದ ವರ್ಷ ಖಾಸಗಿ ಸಂಸ್ಥೆಗಳಿಂದ ಖರೀದಿಸಿರುವ ವಿದ್ಯುತ್‌ಗೆ 2 ಸಾವಿರ ಕೋಟಿ ರೂ. ಬಾಕಿ ಪಾವತಿಸಬೇಕಿದೆ ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು. ವಿಧಾನಸಭೆಯಲ್ಲಿ ಶುಕ್ರವಾರ ಜೆಡಿಎಸ್‌ನ ಡಿ.ಸಿ. ತಮ್ಮಣ್ಣ ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ಬಾರಿ ಪ್ರತಿ ಯುನಿಟ್‌ಗೆ 5.08 ಪೈಸೆಯಂತೆ ವಿದ್ಯುತ್ ಖರೀದಿಸಲಾಗಿತ್ತು. ಆದರೆ ಕೆಲ ಆಡಳಿತಾತ್ಮಕ ಕಾರಣಗಳಿಂದ ಇನ್ನೂ ಬಾಕಿ ಹಣ ಪಾವತಿಸಲಾಗಿಲ್ಲ. ಈ ಬಾರಿಯೂ ವಿದ್ಯುತ್ ಖರೀದಿಗೆ ಸರ್ಕಾರ ಮುಂದಾಗಿದೆ. ಯಾವುದೇ ವಿದ್ಯುತ್ ಸಮಸ್ಯೆಯಾಗದಂತೆ ಎಚ್ಚರವಹಿಸಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ಉಂಟಾಗಿರುವ ವಿದ್ಯುತ್ ಸಮಸ್ಯೆ ನೀಗಿಸಲು 1200 ಮೆ.ವಾಟ್ ವಿದ್ಯುತ್ ಖರೀದಿಸಲು ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.



ರೈತರಿಗೆ 7 ಗಂಟೆ ನಿರಂತರ ವಿದ್ಯುತ್ ನೀಡುವುದು ಅಸಾಧ್ಯವಾಗಬಹುದು. ಬದಲಾಗಿ ದಿನಕ್ಕೆ 7 ಗಂಟೆ ವಿದ್ಯುತ್ ನೀಡುವುದಕ್ಕೆ ಸರ್ಕಾರ ಬದ್ಧವಾಗಿದೆ.

। ಡಿ.ಕೆ. ಶಿವಕುಮಾರ್ ಇಂಧನ ಸಚಿವ

ಗ್ರಾಮ ಪಂಚಾಯಿತಿಗಳ ಬೀದಿ ದೀಪ ಮತ್ತು ಕುಡಿವ ನೀರಿನ ಸ್ಥಾವರಗಳ 2014ರ ಮಾ.31ರವರೆಗೆ ಬಾಕಿ ಇರುವ 3,230.28 ಕೋಟಿ ರೂ. ವಿದ್ಯುತ್ ಬಿಲ್‌ನ್ನು ನೇರವಾಗಿ ಹೆಸ್ಕಾಂಗಳಿಗೆ ಪಾವತಿಸಲು ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ. ಆದರೆ ಕೆಲ ಷರತ್ತು ಹಾಕಿದ್ದು, ಅದರ ಪ್ರಕಾರ 2014ರ ಏಪ್ರಿಲ್ ನಂತರ ಗ್ರಾಪಂಗಳು ವಿದ್ಯುತ್ ಬಿಲ್‌ನ್ನು ಆಯಾ ಆರ್ಥಿಕ ಸಾಲಿನಲ್ಲಿಯೇ ಪಾವತಿಸಬೇಕು.

। ಎಚ್.ಕೆ. ಪಾಟೀಲ್ ಗ್ರಾಮೀಣಾಭಿವೃದ್ಧಿ ಸಚಿವ

### ವಿದ್ಯುತ್ ಖರೀದಿಗೆ ಸರ್ಕಾರ ನಿರ್ಧಾರ

# ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇಲ್ಲ: ಡಿಕೆಶಿ

ವಿಧಾನಸಭೆ: ಈ ಬಾರಿಯ ಬೇಸಿಗೆಯಲ್ಲಿ ಲೋಡ್‌ಶೆಡ್ಡಿಂಗ್ ಇಲ್ಲದಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರ ಭರವಸೆ ನೀಡಿದೆ.

ವಿಧಾನಸಭೆಯಲ್ಲಿ ಜೆಡಿಎಸ್‌ನ ಡಿ.ಸಿ.ತಮ್ಮಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಇಂಧನ ಸಚಿವ ಡಿ.ಕೆ.ಶಿವಕುಮಾರ್, ಕಳೆದ 2-3 ವರ್ಷಗಳಿಂದ ಹಿಂದೆಂದೂ ಕಂಡರಿಯದಂತಹ ಬರಗಾಲ ಬಂದಿದೆ. ಶಾಖೋತ್ಪನ್ನ ಘಟಕಗಳಿಗೂ ನೀರು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದಾಗ್ಯೂ, ಶಾಖೋತ್ಪನ್ನ ಘಟಕಗಳಿಗೆ ನೀರು ಪೂರೈಕೆ ಮತ್ತು ಜಲ ವಿದ್ಯುತ್ ಘಟಕಗಳಲ್ಲಿ ನೀರು ಸಂಗ್ರಹ ಮಾಡುವ ಪ್ರಯತ್ನ ಮಾಡಲಾಗಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ರೈತಾಪಿ ವರ್ಗದ ಜನರು ಸೇರಿದಂತೆ ರಾಜ್ಯದ ಜನತೆ ವಿದ್ಯುತ್ ಅಭಾವ ಎದುರಿಸದಂತೆ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದಕ್ಕೆ ಪೂರಕವಾಗಿ ಮಧ್ಯಮಾವಧಿ ಮತ್ತು ಅಲ್ಪಾವಧಿ ವಿದ್ಯುತ್ ಖರೀದಿಗೆ ಮುಂದಾಗಿದೆ. ಆದರೆ, ಮಧ್ಯಮಾವಧಿ ಅವಧಿಯ ವಿದ್ಯುತ್ ಖರೀದಿಗೆ ಟೆಂಡರ್ ಕರೆಯಲಾಗಿತ್ತಾದರೂ ಅದು ದುಬಾರಿಯಾದ್ದರಿಂದ ಕೈಬಿಡಲಾಯಿತು. ಈ ಹಿನ್ನೆಲೆಯಲ್ಲಿ ಅಲ್ಪಾವಧಿಯವರೆಗಿನ ಒಪ್ಪಂದ ಮಾಡಿಕೊಂಡು ವಿದ್ಯುತ್ ಖರೀದಿ ಮಾಡಲಾಗುವುದು ಎಂದು ಹೇಳಿದರು. ಪ್ರಸ್ತುತ ಪ್ರತಿದಿನ 800 ರಿಂದ 1000 ಮೆಗಾವ್ಯಾಟ್ ವಿದ್ಯುತ್ ಕೊರತೆ ಇದೆ. ಈ ಕೊರತೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ ವಿದ್ಯುತ್ ಖರೀದಿ ಮಾಡಿ ಪೂರೈಕೆ ಮಾಡಲಾಗುತ್ತದೆ ಎಂದರು.

ಸತತ ವಿದ್ಯುತ್ ಪೂರೈಕೆ ಅಸಾಧ್ಯ

ರೈತರ ಪಂಪ್‌ಸೆಟ್‌ಗಳಿಗೆ ಸತತವಾಗಿ 7 ಗಂಟೆ ವಿದ್ಯುತ್ ಪೂರೈಕೆ ಮಾಡಲು ಸಾಧ್ಯವಾಗದಿದ್ದರೂ, ರಾತ್ರಿ ವೇಳೆ 3-4 ಗಂಟೆ ಕಾಲ ಮತ್ತು ಹಗಲಿನ ವೇಳೆ ಒಂದೆರಡು ಗಂಟೆ ಕಾಲ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ ಎಂದು ಇಂಧನ ಸಚಿವರು ತಿಳಿಸಿದರು.



ಸದನದಲ್ಲಿ ಮಾತನಾಡುತ್ತಿರುವ ಸಚಿವ ಡಿ.ಕೆ. ಶಿವಕುಮಾರ್.

**1200 ಮೆ.ವ್ಯಾ. ವಿದ್ಯುತ್ ಖರೀದಿಗೆ ಪ್ರಸ್ತಾವನೆ**

ರಾಜ್ಯದಲ್ಲಿನ ವಿದ್ಯುತ್ ಅಭಾವ ತಪ್ಪಿಸಲು ಡಿ.15 ರಿಂದ 2017ರ ಮೇ ತಿಂಗಳವರೆಗೆ 1200 ಮೆ.ವ್ಯಾ. ವಿದ್ಯುತ್ ಖರೀದಿಗೆ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅನುಮೋದನೆ ಕೋರಲಾಗಿದೆ ಎಂದು ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು. ಜೆಡಿಎಸ್‌ನ ಕೆ.ಗೋಪಾಲಯ್ಯ ಹಾಗೂ ಡಾ.ಎಸ್.ರಫೀಕ್‌ಅಹ್ಮದ್ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, ಮುಂಗಾರು ಮತ್ತು ಹಿಂಗಾರು ಮಳೆಯ ವಿಫಲತೆ ಹಾಗೂ ರಾಜ್ಯದ ಜಲಾಶಯಗಳಲ್ಲಿ ನೀರಿನ ಕೊರತೆಯಿಂದಾಗಿ 2014 ಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ 2300 ದಶಲಕ್ಷ ಯುನಿಟ್ ಹಾಗೂ ದೈನಂದಿನ ಜಲವಿದ್ಯುತ್ ಲಭ್ಯತೆ ಪ್ರಮಾಣದಲ್ಲಿ ಸುಮಾರು 10 ದಶಲಕ್ಷ ಯುನಿಟ್ ಕಡಿಮೆಯಾಗಿದೆ ಎಂದಿದ್ದಾರೆ.

---

# ಸೋಲಾರ್ ಘಟಕಕ್ಕೆ ಶೇ.50ರಷ್ಟು ಸಬ್ಸಿಡಿ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿನ ಮಗ್ಗಗಳಿಗೆ ಸೋಲಾರ ಘಟಕ ಅಳವಡಿಸಿಕೊಂಡಲ್ಲಿ ಶೇ.50ರಷ್ಟು ಸಹಾಯ ಧನ ಲಭ್ಯವಾಗಲಿದೆ.

ಕೈಮಗ್ಗ ಮತ್ತು ಜವಳಿ ಇಲಾಖೆ ಈ ಯೋಜನೆ ಜಾರಿಗೊಳಿಸಿದ್ದು, ವಿದ್ಯುತ್ ಅಭಾವ ಎದುರಿಸುತ್ತಿರುವ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗ, ಹಾಗೆಯೇ ವಿದ್ಯುತ್ ಮಗ್ಗ ಘಟಕಗಳು ತಮ್ಮ ವಿದ್ಯುತ್ ಮಗ್ಗಗಳನ್ನು ಆಧುನೀಕರಣಗೊಳಿಸಿಕೊಳ್ಳಲು ಕೇಂದ್ರ ಸರ್ಕಾರದ ಇನ್-ಸಿಟು ಯೋಜನೆಯಡಿ ಶೇ. 50 ರಷ್ಟು ಸಹಾಯಧನ ಒದಗಿಸಲಿದೆ. ಈ ಕುರಿತು ಹೆಚ್ಚಿನ ವಿವರಗಳಿಗೆ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 080-22243578 ಮೊ. ಸಂಖ್ಯೆ 9663644411 ಸಂಪರ್ಕಿಸಬಹುದಾಗಿದೆ.

---

# 'ಲೋಡ್‌ಶೆಡ್ಡಿಂಗ್ ತಪ್ಪಿಸಲು ಕ್ರಮ'

ಬೆಳಗಾವಿ: ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ತಪ್ಪಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಶುಕ್ರವಾರ ಜೆಡಿಎಸ್ ಸದಸ್ಯ ಡಿ.ಸಿ. ತಮ್ಮಣ್ಣ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬರ ಪರಿಸ್ಥಿತಿಯಿಂದಾಗಿ ಎಲ್ಲ ಜಲಾಶಯಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿದ್ದು ವಿದ್ಯುತ್ ಉತ್ಪಾದನೆ ಕುಂಠಿತವಾಗಿದೆ ಎಂದರು.

ರಾಯಚೂರು ಶಾಖೋತ್ಪನ್ನ ಕೇಂದ್ರಕ್ಕೂ ಸಮರ್ಪಕವಾಗಿ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ. ಎಲ್ಲ ಮೂಲಗಳಿಂದ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 18,015 ಮೆಗಾ ವಾಟ್. ಅಕ್ಟೋಬರ್ ತಿಂಗಳಲ್ಲಿ ವಿವಿಧ ಮೂಲಗಳಿಂದ 6,035 ಮೆಗಾವಾಟ್ ವಿದ್ಯುತ್ ಲಭ್ಯವಾಗಿದೆ. 2015-16ನೇ ಸಾಲಿನಲ್ಲಿ ಒಟ್ಟು 5,082 ಕೋಟಿ ಯೂನಿಟ್ ವಿದ್ಯುತ್ ಬಳಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಡಿಸೆಂಬರ್ 15ರಿಂದ ಮುಂದಿನ ಮೇ ತಿಂಗಳವರೆಗೆ 1200 ಮೆಗಾ ವಾಟ್ ವಿದ್ಯುತ್ ಖರೀದಿಸಲು ಕೆ.ಇ.ಆರ್.ಸಿ ಅನುಮೋದನೆ ಕೋರಲಾಗಿದೆ. ಕೇಂದ್ರೀಯ ಉತ್ಪಾದನಾ ಘಟಕಗಳಿಂದ ನವೆಂಬರ್ 6ರಿಂದ 200 ಮೆಗಾ ವಾಟ್ ಹೆಚ್ಚುವರಿ ವಿದ್ಯುತ್ ರಾಜ್ಯಕ್ಕೆ ಸಿಗುತ್ತಿದೆ ಎಂದು ಸಚಿವರು ತಿಳಿಸಿದರು.

---

# ವಿದ್ಯುತ್ ವ್ಯತ್ಯಯ ನಾಳೆ

**ಬೆಂಗಳೂರು:** ಬೆಸ್ಕಾಂ ಕೈಗೊಂಡಿರುವ ತುರ್ತು ಕಾಮಗಾರಿಯಿಂದಾಗಿ ಭಾನುವಾರ (ಡಿ. 4ರಂದು)ದಲ್ಲಿ ಬೆಳಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ನಗರದ ಕೆಲ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ.

ಪೀಣ್ಯ 3ನೇ ಮತ್ತು 4ನೇ ಹಂತ, ಬೃಂದಾವನ 3ನೇ ಫೇಸ್, ಶ್ರೀ ರಾಮ ಡಿಲಕ್ಸ್, ಕೃಷಿ ನೀರಾವರಿ, ರಾಜಗೋಪಾಲನಗರ, ಪ್ರೇರಣ ಮೋಟಾರ್ಸ್ ರಸ್ತೆ, ಎನ್‌ಟಿಟಿಎಫ್ ರಸ್ತೆ, ಎನ್.ಜಿ. ಹಳ್ಳಿ, ಶಿವಪುರ, ಕೆಪಿಎಲ್ ರಸ್ತೆ, ಎಫ್‌ಎಫ್‌ಐ ಕೈಗಾರಿಕಾ ರಸ್ತೆ, ಗೌರಿಶಂಕರ ರಸ್ತೆ, ಬೃಂದಾವನ ಮುಖ್ಯರಸ್ತೆ, ಕೆಐಎಡಿಬಿ ಕಾಂಪ್ಲೆಕ್ಸ್, ಎಬಿಬಿ 7ನೇ ಮುಖ್ಯರಸ್ತೆ, ಅಗ್ರೋ ಕೆಮ್, ಜಿಸಿಎಲ್, ಕೆನರಾ ಬ್ಯಾಂಕ್, ಹೆಗ್ಗನಹಳ್ಳಿ ಮುಖ್ಯರಸ್ತೆ, ಎಸ್‌ಎಲ್‌ವಿ ಕೈಗಾರಿಕಾ ಎಸ್ಟೇಟ್‌ನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

>> ||

3/12/16

## ‘ಬೇಸಿಗೆಯಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಇಲ್ಲ’

ವಿಧಾನಸಭೆ: ಮುಂದಿನ ಬೇಸಿಗೆಯಲ್ಲಿ ಲೋಡ್‌ಶೆಡ್ಡಿಂಗ್ ಇಲ್ಲದಂತೆ ವಿದ್ಯುತ್ ಪೂರೈಕೆಗೆ ಎಲ್ಲಾ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಡಿ.ಸಿ. ತಮ್ಮಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪ್ರಸ್ತುತ ಪ್ರತಿದಿನ 800ರಿಂದ 1000 ಮೆಗಾವ್ಯಾಟ್ ವಿದ್ಯುತ್ ಕೊರತೆ ಇದೆ. ಈ ಕೊರತೆಯನ್ನು ಸರಿದೂಗಿಸುವುದರೊಂದಿಗೆ ಮುಂದಿನ ಬೇಸಿಗೆಗೂ ಅಗತ್ಯವಿರುವ ವಿದ್ಯುತ್ ಖರೀದಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗುತ್ತಿದೆ. ಮಧ್ಯಮಾವಧಿ ವಿದ್ಯುತ್ ಖರೀದಿ ವೆಚ್ಚದಾಯಕ ಆಗಿರುವುದರಿಂದ ಅಲ್ಪಾವಧಿ ವಿದ್ಯುತ್ ಖರೀದಿಯತ್ತ ಗಮನಹರಿಸಲಾಗಿದೆ. ಒಟ್ಟಿನಲ್ಲಿ ಬೇಸಿಗೆಯಲ್ಲಿ ಲೋಡ್‌ಶೆಡ್ಡಿಂಗ್‌ನಿಂದ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ರಾಜ್ಯ ಸರ್ಕಾರ ರೈತಾಪಿ ವರ್ಗದ ಜನರು ಸೇರಿದಂತೆ ರಾಜ್ಯದ ಜನತೆ ವಿದ್ಯುತ್ ಅಭಾವ ಎದುರಿಸದಂತೆ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ರೈತರ ಪಂಪ್‌ಸೆಟ್‌ಗಳಿಗೆ ಸತತವಾಗಿ 7 ಗಂಟೆ ವಿದ್ಯುತ್ ಪೂರೈಕೆ ಮಾಡಲು ಸಾಧ್ಯವಾಗದಿದ್ದರೂ, ರಾತ್ರಿ ವೇಳೆ 3–4 ಗಂಟೆ ಕಾಲ ಮತ್ತು ಹಗಲಿನ ವೇಳೆ ಒಂದೆರಡು ಗಂಟೆ ಕಾಲ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ ಎಂದರು.

---

3/12/2016 page-4

## ಸಹಾಯಧನ ಯೋಜನೆ ಜಾರಿ

ಬೆಂಗಳೂರು: ವಿದ್ಯುತ್ ಅಭಾವ ಎದುರಿಸುತ್ತಿರುವ ಗ್ರಾಮೀಣ ಪ್ರದೇಶದ ಸಣ್ಣ ಪ್ರಮಾಣದ ವಿದ್ಯುತ್ ಮಗ್ಗ ಘಟಕಗಳಿಗೆ ಛಾವಣಿ ಮೇಲಿನ ಸೌರಶಕ್ತಿಯ ಉಪಕರಣಗಳನ್ನು ಅಳವಡಿಸಿಕೊಳ್ಳಲು ಹಾಗೂ ಕೈಮಗ್ಗಗಳನ್ನು ಆಧುನೀಕರಣ ಗೊಳಿಸಿಕೊಳ್ಳಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಶೇ 50ರಷ್ಟು ಸಹಾಯಧನ ಒದಗಿಸುವ ಯೋಜನೆ ಜಾರಿಗೊಳಿಸಿದೆ. ಆಸಕ್ತರು ವಿದ್ಯುತ್ ಮಗ್ಗ ಉದ್ದಿಮೆದಾರರು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾಮಟ್ಟದ ಕಚೇರಿ ಅಥವಾ ವಿದ್ಯುತ್ ಮಗ್ಗ ಸೇವಾ ಕೇಂದ್ರಗಳನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ದೂ.ಸಂ. 080 [illegible]/ [illegible] ಮೊ. [illegible] ದೊಡ್ಡಬಳ್ಳಾಪುರ [illegible].

---

3/12/2016 page-3

## ಪ್ರವೇಶ ಪರೀಕ್ಷೆಗೆ ಅರ್ಜಿ

ಬೆಂಗಳೂರು: ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ ನಡೆಸುವ 2016–17ನೇ ಸಾಲಿನ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ ಮತ್ತು ಗಣಿ ಹಾಗೂ ತಂತಿ ಕೆಲಸಗಾರರ ಗ್ರೇಡ್ 2 ರಹದಾರಿ ನೀಡುವಂತಹ ಪರೀಕ್ಷೆಗಳನ್ನು ನಡೆಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಜಿಲ್ಲಾಮಟ್ಟದ ವಿದ್ಯುತ್ ಪರಿವೀಕ್ಷಕರಿಗೆ ಡಿ.15 ರಿಂದ ಜ. 14 ರವರೆಗೆ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ಆನ್ ಲೈನ್ ಸೇವೆ (ಇ–ಸುರಕ್ಷಾ) ಅಡಿಯಲ್ಲಿ ಸಲ್ಲಿಸುವುದು. ಜತೆಗೆ ಸಲ್ಲಿಸಿರುವ ದಾಖಲೆಗಳ ಪ್ರತಿಯನ್ನು ಸಂಬಂಧಿಸಿದ ಉಪ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವಂತೆ ಮುಖ್ಯ ವಿದ್ಯುತ್ ಪರವೀಕ್ಷಕರ ಕಚೇರಿ ಪ್ರಕಟಣೆ ತಿಳಿಸಿದೆ.

---

3/12/2016 page-7

## ಕಾರ್ಖಾನೆಗೆ 20 ಕೋಟಿ ಲೀಟರ್ ನೀರು ಬಳಕೆ

ರಾಯಚೂರಿನಲ್ಲಿ ರಾಜ್ಯದಲ್ಲೇ ಅತಿ ದೊಡ್ಡ ಉಷ್ಣ ವಿದ್ಯುತ್ ಸ್ಥಾವರ ಕಾರ್ಯ ನಿರ್ವಹಿಸುತ್ತಿದ್ದು, ಇಲ್ಲಿಗೆ ಪ್ರತಿದಿನ 2 ಲಕ್ಷ ಕ್ಯುಬಿಕ್ ಮೀ. ಪ್ರಮಾಣದ ನೀರನ್ನು ನದಿಯಿಂದ ಹರಿಸಲಾಗುತ್ತಿದೆ. ಅಂದರೆ ಬರೋಬ್ಬರಿ 20 ಕೋಟಿ ಲೀ. ನೀರು. ಕೈಗಾರಿಕೆ ವಾರಕ್ಕೂ ಹೆಚ್ಚು ಅವಧಿ ಬಂದ್ ಆಗಿರುವ ನಿದರ್ಶನವೇ ಇಲ್ಲ ಎಂದು ಸ್ಥಾವರದ ಎಕ್ಸಿಕ್ಯೂಟಿವ್ ಡೈರೆಕ್ಟರ್ ವೇಣುಗೋಪಾಲ್ ತಿಳಿಸಿದ್ದಾರೆ.

---

## ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ




ಬೆಂಗಳೂರು: ಬೆಸ್ಕಾಂ ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಂಡಿರುವ ಕಾರಣ ನಗರದ ವಿವಿಧ ಕಡೆಗಳಲ್ಲಿ ಭಾನುವಾರ (ಡಿ.4) ಬೆಳಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ರಾಜಾಜಿನಗರ, ಸುಂಕದಕಟ್ಟೆ, ಮಾರುತಿನಗರ, ಬ್ಯಾಡರಹಳ್ಳಿ, ಮಾಗಡಿ ಮುಖ್ಯರಸ್ತೆ, ಪೀಣ್ಯ, ಕೊಡಿಗೇಹಳ್ಳಿ, ಅಂಜನಾನಗರ, ಹೆಗ್ಗನಹಳ್ಳಿ, ಶಿವಾಜಿನಗರ, ಮಹಾಲಕ್ಷ್ಮಿ ಬಡಾವಣೆ, ಬಸವೇಶ್ವರನಗರ, ಬೃಂದಾವನ, ನೆಲಗೆದರನಹಳ್ಳಿ, ತಿಗಳರಪಾಳ್ಯ ಸುತ್ತಮುತ್ತಲ ಪ್ರದೇಶಗಳಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.